## ಕೋಳಿಯೋ, ಹಾವೋ!



ಕರ್ನಾಟಕ ರಾಜ್ಯ ಲಾಂಛನದಲ್ಲಿರುವ ಗಂಡಭೇರುಂಡ ಪಕ್ಷಿಯಂತೆ, ಕುಕ್ಕುಟ ಸರ್ಪ ಪಕ್ಷಿಯೂ ಒಂದು ಕಾಲ್ಪನಿಕ ಪಕ್ಷಿ. ಜೈನ ಪರಂಪರೆಯ ಭಗವತಿ ಪದ್ಮಾವತಿ ದೇವಿಯ ವಾಹನವಾಗಿ ಈ ಪಕ್ಷಿಯನ್ನು ಗುರುತಿಸಲಾಗುತ್ತದೆ.

ಈ ಕಾಲ್ಪನಿಕ ಪಕ್ಷಿಯ ಉಬ್ಬು ಶಿಲ್ಪವು ಸಾಗರ ತಾಲ್ಲೂಕಿನ ಜೋಗದಿಂದ ಕೇವಲ 8 ಕಿ.ಮೀ ದೂರದಲ್ಲಿರುವ 'ವಡನ್ ಬೈಲ್' ಎಂಬ ಗ್ರಾಮದಲ್ಲಿದೆ. ಇಲ್ಲಿರುವ ಹೆಬ್ಬೈಲು ಪದ್ಮಾವತಿ ದೇವಸ್ಥಾನದ ಮಾನಸ್ತಂಭದಲ್ಲಿ ಈ ಪಕ್ಷಿಯ ಚಿತ್ರವನ್ನು ಕೆತ್ತಲಾಗಿದೆ. ಹಾವಿನ ತಲೆಯ, ಕೋಳಿಯ ದೇಹವನ್ನು ಈ ಶಿಲ್ಪ ಹೊಂದಿದ್ದು, ನೋಡಲು ವಿಶಿಷ್ಟವಾಗಿ ಕಾಣುತ್ತದೆ. ದೇವಸ್ಥಾನದಲ್ಲಿ ನಾಲ್ಕು ಮೂಲೆಗಳಲ್ಲಿಯೂ ಈ ಪಕ್ಷಿಯ ಕೆತ್ತನೆಯನ್ನು ಕಾಣಬಹುದು.

—ಅಂಜನ್ ಕಾಯ್ಕಿಣಿ, ಸಾಗರ



## ಸವಕಳಿ ನಿರ್ಮಿಸಿದ 'ಸಿಂಥೇರಿ ರಾಕ್'

ಪ್ರಾಕೃತಿಕ ಸವಕಳಿಯಿಂದ ಬಂಡೆಗಳು ಎಂಥ ಆಕಾರ ತಾಳಬಹುದು ಎನ್ನುವುದಕ್ಕೆ ಜೀವಂತ ಉದಾಹರಣೆ ಉತ್ತರಕನ್ನಡ ಜಿಲ್ಲೆಯಲ್ಲಿರುವ ಈ ಸಿಂಥೇರಿ ರಾಕ್. ದಾಂಡೇಲಿ ವನ್ಯಧಾಮದ ಅರಣ್ಯದಲ್ಲಿರುವ ಸಿಂಥೇರಿ ರಾಕ್, ಸವಕಳಿಯಿಂದ ನಿರ್ಮಿತವಾಗಿದ್ದು, ಕಾನೇರಿ ನದಿ ದಡದಲ್ಲಿದೆ. ಅಗ್ನಿಶಿಲೆಯಾದ ಗ್ರಾನೈಟ್, ಬೆಸಾಲ್ಟ್, ಮರಳು ಶಿಲೆ, ಸುಣ್ಣದ ಶಿಲೆ ಮೊದಲಾದವುಗಳಿಂದ ಕೂಡಿದ ಈ ಬಂಡೆ ನದಿಯ ಹರಿವಿಗೆ ಪ್ರತಿರೋಧ ಒಡ್ಡಿ ನಿಂತಂತೆ ಕಾಣುತ್ತದೆ. ಈ ಕಡಿದಾದ ಬಂಡೆಯ ಎತ್ತರ 300 ಅಡಿ ಎಂದು ಅಂದಾಜಿಸಲಾಗಿದೆ.

ರಭಸವಾಗಿ ಹರಿಯುವ ಕಾನೇರಿ ನದಿಯು ಬಂಡೆಯನ್ನು ಕೊರೆದು ನಾನಾ ರೂಪಗಳನ್ನು ಮೂಡಿಸಿದೆ. ಈ ರೀತಿ ಉಂಟಾದ ಪೊಳ್ಳಾದ ಜಾಗಗಳಲ್ಲಿ ಪಾರಿವಾಳ, ಜೇನುಗಳು ಗೂಡುಗಳನ್ನು ಕಟ್ಟಿಕೊಂಡು ವಾಸಿಸುತ್ತಿವೆ. ಜಗತ್ತಿನ ಈ ರೀತಿಯ ಎತ್ತರದ ಬಂಡೆ ಉತ್ತರ ಪಾಕಿಸ್ತಾನದ ಕಾರಾಕೋರಂ ಶ್ರೇಣಿಯಲ್ಲಿದೆ. 'ಗ್ರೇಟ್ ಟ್ರ್ಯಾಂಗೋ' ಎಂದು ಕರೆಯಲಾಗುವ ಈ ಶಿಲೆಯ ಎತ್ತರ 1,340 ಅಡಿ ಎನ್ನಲಾಗಿದೆ. ಸವಕಳಿಯಿಂದ ಉಂಟಾಗಿರುವ ಸಿಂಥೇರಿ ರಾಕ್ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಆದರೆ ಹಲವರು ಇಲ್ಲಿನ ನದಿಯಲ್ಲಿ ಈಜಲು ಹೋಗಿ ಅದರ ರಭಸಕ್ಕೆ ತಮ್ಮ ಪ್ರಾಣವನ್ನೇ ಕಳೆದುಕೊಂಡದ್ದಿದೆ.

—ಅರುಣ್ ಕಿಲ್ಲೂರು, ಬೆಳ್ತಂಗಡಿ

## ಹೊಂದಾಣಿಕೆ ಜೀವನ ಇದೇನಾ?

ಬೃಹತ್ ಕಾಂಡ ಹೊಂದಿರುವ ಮರಗಳ ಪೊಟರೆಗಳಲ್ಲಿ ಹಕ್ಕಿಗಳು ತಿಂದು ಉದುರಿಸಿದ ಬೀಜ ಪ್ರಸಾರದಿಂದ ಆಲದ ಮರ, ಬೇವಿನ ಮರ ಬೆಳೆದಿರುವುದನ್ನು ಕಂಡಿದ್ದೇವೆ. ಹಾಗೆಯೇ ಇಂಥದ್ದೊಂದು ಚಿತ್ರಣವನ್ನು ಪುರಾಣ ಪ್ರಸಿದ್ಧವಾದ ಲೇಪಾಕ್ಷಿ ದೇವಸ್ಥಾನದ ಪ್ರಾಂಗಣದಲ್ಲಿ ಕಾಣಬಹುದು. ದೇವಸ್ಥಾನದ ಅಂಗಳದಲ್ಲಿ 20 ಅಡಿಗಳಿಗೂ ಎತ್ತರ ಬೆಳೆದುನಿಂತಿರುವ ಈ ಬೃಹತ್ ಬಿಲ್ವಪತ್ರ ಮರದ ಟೊಂಗೆಯಲ್ಲಿ ಅರಳಿ ಮರವೊಂದು ಬೆಳೆದು ನಿಂತು ಗಮನ ಸೆಳೆಯುತ್ತಿದೆ. ಬಿಲ್ವಪತ್ರೆ ಮರದ ಸಾರವನ್ನು ಹೀರಿಕೊಂಡು ತಾನೂ ಬೆಳೆಯುತ್ತಿರುವ ಅರಳಿ ಮರದ ಈ ದೃಶ್ಯ ಹೊಂದಾಣಿಕೆಯ ಜೀವನ ಪಾಠವನ್ನು ಬೋಧಿಸಿದಂತೆ ಕಾಣುತ್ತಿದೆಯಲ್ಲವೇ?

—ಪ. ಚಂದ್ರಕುಮಾರ, ಗೌನಹಳ್ಳಿ

